ಶ್ರೀಮತಿ ಬನವರಾಜೇಶ್ವರಿ.—ಆ ಸಾಮಾನುಗಳು ಹೊಸದಲ್ಲ, ಸೆಕೆಂಡ್‌ಹ್ಯಾಂಡ್ ಆಗಿರುವು ದರಿಂದ ಅಷ್ಟು ಬೆಲೆ ಬಾಳುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಕೊಡತಕ್ಕ 2 ಲಕ್ಷ 39 ಸಾವಿರದ 800 ರೂಪಾಯಿಗಳು ಬಹಳ ಕಡಿಮೆ ಎಂದು ಮತ್ತೆ ಬರುತ್ತಿದ್ದಾರೆ. ಆ ಸಾಮಾನುಗಳ ಬೆಲೆಯನ್ನು ಈಗಿನ ಮಾರ್ಕೆಟ್ ರೇಟ್ ಲೆಕ್ಕ ಹಾಕಿ ಕೊಟ್ಟಿದ್ದೇವೆ. ಯಾವತ್ತಿಗೂ ಹೆಚ್ಚು ಬೆಲೆ ಮಾಡಿಲ್ಲ. ಈ ಬೆಲೆಗೂ ಇನ್ನೂ ಕಂಪನಿ ಒಪ್ಪುತ್ತಾ ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಕಂಪನಿ ಮಾಲೀಕರು ಮುಂಡು ಕಾಂಗ್ರೆಸ್ ಸದಸ್ಯರಾಗಿ ದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಯಾವ ಪಕ್ಷದಲ್ಲಿದ್ದಾರೋ ಗೊತ್ತಿಲ್ಲ. ಅವರು ಪಿ.ಎಸ್.ಪಿ. ಅಥವಾ ಎಸ್.ಎಸ್.ಪಿಯಲ್ಲಿರಲಿ, ಅದು ಸರ್ಕಾರಕ್ಕೆ ಗೊತ್ತಾಗುವುದಿಲ್ಲ.

Sri K. H. PATIL.—Is there any inventory made and payment made accordingly ?

ಶ್ರೀ ವೀರೇಂದ್ರ ಪಾಟೀಲ್.—ವ್ಯಾಲ್ಯುಯೇಷನ್ ಮಾಡಿದ್ದೇವೆ. ಅವರಿಂದ ನಾವು ಪಡೆಯ ಬೇಕಾದುದು ಏನೇನು ಎಂಬುದನ್ನೂ ಮತ್ತು ಅದರ ವ್ಯಾಲ್ಯುಯೇಷನ್ನನ್ನೂ ತೋರಿಸತಕ್ಕ ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ.

ಶ್ರೀಮತಿ ಎಸ್. ಎಂ. ಪಟ್ಟಣ್.—ಸರ್ಕಾರದವರು ಆ ಕಂಪೆನಿಯಿಂದ ಕೊಂಡುಕೊಳ್ಳುವ ಸಾಮಾನುಗಳು ಹಳೆಯದಾಗಿದ್ದರೂ ಅವುಗಳ ದರ ಹೊಸ ಸಾಮಾನುಗಳಿಗಿಂತ ಹೆಚ್ಚಾಗಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಅಧಿಕಾರಿಗಳು ಹೋಗಿ ನೋಡಿಕೊಂಡು ಅವುಗಳ ವ್ಯಾಲ್ಯುಯೇಷನ್ ಮಾಡಿದ್ದಾರೆ. ಆ ಕಂಪೆನಿಯವರು ಈಗ ಕೊಟ್ಟಿರುವುದು ಬಹಳ ಕಡಿಮೆ ಇನ್ನೂ ಹೆಚ್ಚುಮಾಡಿ ಎಂಬುದಾಗಿ ಕೇಳುತ್ತಿದ್ದಾರೆ.

Mysore Village Offices Abolition Act

*Q.—762. Sri A. J. DODDAMETI (Ron).—

Will the Minister for Revenue and Forests be pleased to state :—

(*a*) whether it is a fact that the Mysore Village Offices Abolition Act, 1961 has come into force from 21st January 1967 ;

(*b*) if so, the arrangements made by the Government to look after the village duties in the place of Patels, Thoti Talwars and Mahars ?

*A.—Sri B. RACHAIAH (Minister for Revenue and Forests).—

(*a*) No.

The Mysore Village Offices Abolition Act, 1961 has come into force from 1st February 1963.

(*b*) The question of making permanent alternative arrangement is still under consideration of Government. For administrative reasons the posts of Patels, Thoties, Talwars and Mahars are continued up to 1st January 1968.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಶಾಸನವನ್ನು ಸರಿಯಾಗಿ ವ್ಯವಸ್ಥಿತ ರೀತಿಯಿಂದ ಜಾರಿಗೆ ತರುವುದಕ್ಕೆ ಈಗ 1—1—68 ರವರೆಗೆ ಅವಧಿ ಕೇಳಿದ್ದೀರಿ. ಇಷ್ಟು ಅವಧಿ ಏಕೆ ?

ಶ್ರೀ ಬಿ. ರಾಚಯ್ಯ.—ಈ ಶಾಸನ 1963 ರಿಂದ ಜಾರಿಗೆ ಬಂದಿದ್ದರೂ ಕೆಲವು ಗ್ರಾಮಾಧಿಕಾರಿಗಳು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದರು. ಅಲ್ಲಿ ತೀರ್ಮಾನವಾದ ಮೇಲೆ ಅವರು ಮತ್ತೆ ಸುಪ್ರೀಂ ಕೋರ್ಟಿಗೆ ರಿಟ್ ಹಾಕಿದ್ದರು. ಅಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ತಡವಾಗಿದೆ. ಅದರಿಂದಾಗಿ ಅದನ್ನು ತೀವ್ರವಾಗಿ ಜಾರಿಗೆ ಕೊಡುವುದಕ್ಕಾಗಲಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಇನ್ನು ಒಂದು ವರ್ಷದ ನಂತರ ಈ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ತಗೆಯುವಾಗ ಅವರ ಬದಲಾಗಿ ಯಾವ್ಯಾವ ಅಧಿಕಾರಿಗಳನ್ನು ನೇಮಿಸುತ್ತೀರಿ ? ಯಾವ ರೀತಿಯ ಸಂಬಳವನ್ನು ಅವರಿಗೆ ನಿಗದಿ ಮಾಡುತ್ತೀರಿ ? ಮತ್ತು ಯಾವ್ಯಾವ ರೀತಿಯ ವ್ಯವಸ್ಥೆ ಮಾಡಬೇಕೆಂದು ಆಲೋಚನೆ ಮಾಡಿದ್ದೀರಿ ? ಏನಾದರೂ ಯೋಜನೆ ಅದರ ಬಗ್ಗೆ ಸಿದ್ಧವಾಗಿದೆಯೋ ಇಲ್ಲವೋ ?

ಶ್ರೀ ವೀರೇಂದ್ರ ಪಾಟೀಲ್ (ಸಹಕಾರ ಮತ್ತು ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳು).—ಗ್ರಾಮಮಟ್ಟದಲ್ಲಿ ಪಂಚಾಯತಿಗೆ ಸಂಬಂಧಪಟ್ಟ ಹಾಗೆ ಒಬ್ಬ ಸೆಕ್ರೆಟರಿಗಳು, ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಹಾಗೆ ಒಬ್ಬ ಸೆಕ್ರೆಟರಿಗಳು ಮತ್ತು ನಮ್ಮ ರೆವಿನ್ಯೂ ಕರೆಕ್ಷನ್ಸಿಗೆ ಬೇಕಾದಂಥ ಒಬ್ಬರು—ಹೀಗೆ ಮೂರು ಮಟ್ಟದಲ್ಲಿ ಮೂರು ಇರಾಖೆಗಳಿಗೆ ಸಂಬಂಧಪಟ್ಟ ಹಾಗೆ ಒಬ್ಬೊಬ್ಬರು ಗ್ರಾಮದ ಮಟ್ಟದಲ್ಲಿ ಅಧಿಕಾರಿಗಳು ಇರಬೇಕೆಂಬ ಅಭಿಪ್ರಾಯವಿದ್ದುದರಿಂದ ಆಯಾ ಗ್ರಾಮದಲ್ಲಿ ಅಷ್ಟೊಂದು ಹಣವನ್ನು ಅವರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಮೂರು ಕೆಲಸಗಳನ್ನು ಒಬ್ಬೊಬ್ಬರು ನೋಡಿಕೊಳ್ಳುವ ವ್ಯವಸ್ಥೆ ಸರಿಯಾದುದು ಎಂದು ಸರ್ಕಾರದ ಗಮನವಲ್ಲಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಗ್ರಾಮಾಧಿಕಾರಿಗಳ ಕೆಲಸವನ್ನು ಯಾವ ರೀತಿಯಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಇಷ್ಟು ಕಾಲಾವಕಾಶ ಕೇಳಿರುವುದು ಪ್ರತಿಹಳ್ಳಿಗೂ ಕೂಡ 4ನೇ ದರ್ಜೆಯ ಒಬ್ಬ ನೌಕರ ಸಿಕ್ಕಿದರೆ ಸಾಕು. ಈಗ ಗ್ರಾಮಾಧಿಕಾರಿಗಳು ಮಾಡತಕ್ಕ ಕೆಲಸವನ್ನು ಒಬ್ಬನೇ ಮಾಡಬಲ್ಲನೆಂಬುದಾಗಿ ಸರ್ಕಾರದ ಯೋಚನೆಯಿಲ್ಲದೆ.

2-00 P. M.

ಶ್ರೀ ಎ. ಜೆ. ದೊಡ್ಡಮೇಟಿ.—ಅವರಿಗೆ ಯಾವ ಸ್ಕೇಲು ಪ್ರಕಾರ ಸಂಬಳವನ್ನು ಗೊತ್ತು ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಅದೂ ಕೂಡ ಯೋಚನೆಮಾಡುತ್ತಿದ್ದೇವೆ. ನಾಲ್ಕನೇ ವರ್ಗದ ನೌಕರರಿಗೆ ಏನು ಸಂಬಳವನ್ನು ಕೊಡುತ್ತಿದೆಯೋ ಅದು ಇರಬೇಕು ಎನ್ನುವುದು ಸರ್ಕಾರದ ಇಚ್ಛೆ.

ಶ್ರೀ ಎಂ. ಜಿ. ಬಣಕಾರ್.—ಗ್ರಾಮಾಧಿಕಾರಿಗಳ ಹುದ್ದೆಯನ್ನು ರದ್ದು ಮಾಡುವುದಕ್ಕೆ ಕಾನೂನು 1-2-63 ರಿಂದ ಜಾರಿಗೆ ಬಂತು. ಆದರೆ ಅದನ್ನು 1968 ನೇ ಇಸವಿಯವರೆಗೆ ಮುಂದು ವರಿಸಿದ್ದೀರಿ, 1967 ನೇ ಇಸವಿಯಲ್ಲಿ ಮಹಾಚುನಾವಣೆ ಬರುತ್ತದೆ ಎನ್ನುವ ಭಯದಿಂದ ಏನಾದರೂ ಆ ರೀತಿ ಮುಂದುವರಿಸಿದ್ದೀರಾ ಹೇಗೆ ?

ಶ್ರೀ ಬಿ. ರಾಚಯ್ಯ.—ನಾನು ಈಗಾಗಲೇ ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಆ ಕೇಸು ಸುಪ್ರೀಮ್ ಕೋರ್ಟಿನಲ್ಲಿದೆ. ಅದು ತೀರ್ಮಾನವಾಗುವವರೆಗೆ ಅದನ್ನು ಪೂರ್ಣವಾಗಿ ಜಾರಿಗೆ ಕೊಡುವುದಕ್ಕೆ ಆಗಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಗ್ರಾಮಾಧಿಕಾರಿಗಳಿಗೆ ನಾಲ್ಕನೆಯ ದರ್ಜೆಯ ನೌಕರರ ಸಂಬಳವನ್ನು ಕೊಡಬೇಕೆಂದು ಮಾಡಿದ್ದೇವೆಂದು ಹೇಳಿದಿರಿ, ನಾಲ್ಕನೆಯ ದರ್ಜೆಯ ನೌಕರರು ಎಂದರೆ ಆಫೀಸಿನ ದಳಾಯಿತರು ಆಗುತ್ತಾರೆ. ಹಾಗಾದರೆ ಪಟೇಲರು ಮತ್ತು ಶ್ಯಾನಭೋಗರನ್ನು ಆ ಗ್ರೇಡಿಗೆ ಇಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಜೋಡಿ ತಳವಾರರು ನೀರುಗಂಟಿ ಇವರುಗಳಿಗೆ ನಾಲ್ಕನೆ ದರ್ಜೆಯ ನೌಕರರ ಸಂಬಳವನ್ನು ಕೊಡಬೇಕೆಂದು ಸರ್ಕಾರದ ಗಮನದಲ್ಲಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ತಿಂಗಳು 25ನೇ ತಾರೀಖು ಈ ಗ್ರಾಮಾಧಿಕಾರಿಗಳನ್ನು ತೆಗೆಯುತ್ತಾರೆಂದು ಗೊತ್ತಾಗಿದೆ. ಆದ್ದರಿಂದ ಅವರಿಗೆ ಯಾವಾಗ ಕಾಂಪೆನ್‌ಸೇಷನ್ ಕೊಡುತ್ತೀರಿ, ಮತ್ತು ಎಲ್ಲಿಯವರೆಗೆ ಅವರಿಗೆ ಕಾಂಪೆನ್‌ಸೇಷನ್ ಕೊಡುತ್ತೀರಿ ?

ಶ್ರೀ ಬಿ. ರಾಚಯ್ಯ.—1-1-1968 ನೇ ಇಸವಿಯವರೆಗೆ ಅವರನ್ನು ಮುಂದುವರಿಸಲಾಗಿದೆ. ಅಲ್ಲಿಯವರೆಗೆ ಅವರಿಗೆ ಕಾಂಪೆನ್‌ಸೇಷನ್ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—1-1-1968 ರ ಮೇಲೆ ಅವರನ್ನು ಮುಂದುವರಿಸುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಈಗ ನಾವು ಅವರಿಗೆ ಏನು ಕಾಂಪನ್‌ಸೇಷನ್ ಕೊಡಬೇಕೆಂದು ಗೊತ್ತು ಮಾಡಿದ್ದೇವೋ ಅದರಮೇಲೆ ಅವರು ಒಪ್ಪಿಕೊಂಡರೆ ಬಹುಶಃ ಇದಕ್ಕಿಂತ ಮುಂದೆ ಹೋಗುವುದಿಲ್ಲ. ಅವರು ಅದನ್ನು ಒಪ್ಪಿಕೊಳ್ಳದೆ ನಮ್ಮನ್ನು ಕೋರ್ಟಿಗೆ ಎಳೆದರೆ ಅಲ್ಲಿ ಅದು ತಡ ಆದರೆ ಅದಕ್ಕೆ ನಾವು ಜವಾಬ್ದಾರರಲ್ಲ.

ಶ್ರೀ ಎಸ್. ಗೋಪಾಲಗೌಡ.—ಗ್ರಾಮಾಧಿಕಾರಿಗಳ ರದ್ದಿನ ವಿಷಯ ನಾನಾ ಕಾರಣಗಳಿಂದ ಅನೇಕ ವರ್ಷಗಳಿಂದ ವಿಳಂಬವಾಗುತ್ತಿದೆ. ಇದರಿಂದ ಪಂಚಾಯತಿಯ ಕೆಲಸಕಾರ್ಯಗಳು ಮತ್ತು ಸರ್ಕಾರದ ರೆಕಾರ್ಡುಗಳನ್ನು ಇಡತಕ್ಕ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಈಗ ಇರತಕ್ಕ ಗ್ರಾಮಾಧಿಕಾರಿಗಳನ್ನು ವಂಶಪಾರಂಪರ್ಯವಾಗಿ ಬಂದಿರತಕ್ಕ ಹಕ್ಕು ಇಲ್ಲದೆ ಇಟ್ಟುಕೊಂಡು ಬರುತ್ತಿದ್ದೇವೆ. ಆದ್ದರಿಂದ ಈಗ ಆ ಕೆಲಸ ನಡೆಯುತ್ತಿದೆ.

ಶ್ರೀ ಅಜೀಜ್‌ಸೇಟ್.—ಈ ಕಾನೂನು 1963ನೇ ಇಸವಿಯಲ್ಲಿ ಜಾರಿಗೆ ಬಂದರೂ ಕೂಡ ಇಲ್ಲಿಯವರೆಗೂ ಅದನ್ನು ಜಾರಿಗೆ ಕೊಡದೆ ಮುಂದುವರಿಸಿಕೊಂಡು ಬಂದಿದ್ದೀರಿ. ಇದನ್ನು ಜಾರಿಗೆ ಕೊಡಬೇಕೆಂದು ಈ ಕಾನೂನನ್ನು ಮಾಡಿದ್ದೀರಾ ಅಥವಾ ಬರೀ ಪುಸ್ತಕದಲ್ಲಿರಲಿ ಎಂದು ಈ ಕಾನೂನು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಬಹುಶಃ ಮಾನ್ಯ ಪದಸ್ಯರಿಗೆ ಕನ್ನಡ ಅರ್ಥವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಕೋರ್ಟಿಗೆ ಹೋಗಿ ತಡೆ ಆಜ್ಞೆ ಆದ ಪ್ರಕರಣಗಳನ್ನು ಬಿಟ್ಟು ಉಳಿದ ಎಲ್ಲಾ ಪ್ರಕರಣಗಳನ್ನೂ ಸಾರ್ವತ್ರಿಕವಾಗಿ ಬಗೆಹರಿಸುವುದಕ್ಕೆ ಏತಕ್ಕೆ ಮುಂದಕ್ಕೆ ಹಾಕಬೇಕು ?

ಶ್ರೀ ಬಿ. ರಾಚಯ್ಯ.—ಈಗ ಬೊಂಬಾಯಿ ಕರ್ನಾಟಕದಲ್ಲಿ ಹೆರಿಡಿಟರಿ ಆಫೀಸರುಗಳು ಈ ಕಾನೂನು ಪ್ರಕಾರ ಅಧಿಕಾರವನ್ನು ಉಳ್ಳವರಾಗಿದ್ದಾರೆ. ಈಗ ಇದರಲ್ಲಿ ಒಟ್ಟು 46,138 ಜನ ತೋಟ ತಳವಾರರು ಇದ್ದಾರೆ. 30 637 ಜನ ಪಟೇಲರು ಇದ್ದಾರೆ. ಮತ್ತು 11,737 ಜನ ಶ್ಯಾನುಭೋಗರು ಇದ್ದಾರೆ. ಇದರಲ್ಲಿ ಕೆಲವರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಹಣವನ್ನು ಪಾವತಿ ಮಾಡತಕ್ಕವರಲ್ಲಿ ಕೆಲವರನ್ನು ಕಡಿಮೆ ಮಾಡಬೇಕು. ಈಗಾಗಲೇ ಶ್ಯಾನುಭೋಗರು ಯಾರು ಯಾರು ತಾಪೇತಿಯನ್ನು ಹೊಂದಿದ್ದಾರೆಯೋ ಅವರುಗಳನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶನವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

———

Outlets in V. C. Area

*Q.—149. Sri G. MADE GOWDA (Kirugavalu).—

Will the Minister for Public Works be pleased to state :—

the total number of authorised and unauthorised outlets in various canals in V. C. Area ?

A.—Sri VEERENDRA PATIL (Minister for Public Works).—

Authorised outlets	...	1,795
Unauthorised outlets	...	401

ಶ್ರೀ ಜಿ. ಮಾದೇಗೌಡ.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅನಧಿಕೃತ ಹೊರಗಂಡಿಗಳು 401 ಎಂದು ಕೊಟ್ಟಿದ್ದೀರಿ, ಅದು ಇನ್ನೂ ಜಾಸ್ತಿ ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಅನಧಿಕೃತ ಹೊರಗಂಡಿಗಳನ್ನು ಮಾಡಿಕೊಂಡಿರುವುದರಿಂದ ಟೈರ್ ಎಂಡಿನಲ್ಲಿರತಕ್ಕ ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ. ಈ ವಿಷಯ ಸರ್ಕಾರಕ್ಕೆ ಗೊತ್ತಿದೆ. ಆದರೂ ಕೂಡ, ಈ ಕಾಡಿಗಳನ್ನು ಮುಚ್ಚುವುದಕ್ಕೆ ಸರ್ಕಾರ